(ದಿನಾಂಕಃ 12-04-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ. ಪಿ.ಆರ್.ಸಿ. 2, 4, 6 ನೇ ಪ್ರತಿವಾದಿ ಪರ ವಕೀಲರಿಂದ -

ನಾನು 6 ನೇ ಪ್ರತಿವಾದಿ ಇದ್ದು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದನ್ನು ನಾನೇ ಹೇಳಿ ಬರೆಯಿಸಿದ್ದು, ಅದರಲ್ಲಿನ ಸಹಿ ನನ್ನದಾಗಿದ್ದು, ಅದರಲ್ಲಿರುವ ವಿಷಯ ಸತ್ಯವಾಗಿರುತ್ತದೆ.

ನಮ್ಮ ತಕರಾರಿಗೆ ಸಂಬಂಧಿಸಿದಂತೆ 2 ಮತ್ತು 4 ನೇ ಪ್ರತಿವಾದಿಯರು ಬರೆದುಕೊಟ್ಟಂತಹ ಅಧಿಕಾರ ಪತ್ರವನ್ನು ಹಾಜರ ಪಡಿಸಿದ್ದು ಅದನ್ನು ನಿ.ಡಿ-38 ಎಂದು, 2 ಊರಗಳನ್ನು ಮತ್ತು 2 ಡೈರಿಗಳನ್ನು ನಿ.ಡಿ-39 ರಿಂದ 42 ಎಂದು, ತಿಹಶೀಲ್ದಾರ ಕಛೇರಿಯವರು ನೀಡಿದ ಆರ್.ಟಿ.ಎಸ್ ಎಸ್.ಆರ್ 460203 ರಲ್ಲಿನ ಆದೇಶದ ದೃಢೀಕೃತ ಪ್ರತಿ ನಿ.ಡಿ-43 ಎಂದು , ದಿನಾಂಕ 4-12-1990 ರಂದು ಉಪನೊಂದಣಾಧಿಕಾರಿಯವರು ನೀಡಿದಂತಹ ಮಾರುಕಟ್ಟೆ ಬೆಲೆಯ ಪತ್ರ ನಿ.ಡಿ-44 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 7 ಫೋಟೊಗಳನ್ನು, 1 ರಿಸೀದಿ, 1 ಸಿ.ಡಿ. ಹಾಜರ ಪಡಿಸಿದ್ದು ಅವುಗಳನ್ನು ನಿ.ಡಿ-45 ರಿಂದ 53 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿ ಸಲ್ಲಿಸಿದ ದಾವೆಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟಿ ಸವಾಲು ಃ ಶ್ರೀ ಡಿ.ಪಿ.ಟಿ. ವಾದಿ ಪರ ವಕೀಲರಿಂದ -

ವಾದಿಯರನ್ನು ಹಾಗೂ ವಾದಿ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರ ಇದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲು ಸಕಾರಣ ಇಲ್ಲದ್ದರಿಂದ ವಾದಿ ಪರವಾಗಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ಈ ಹಂತದಲ್ಲಿ 7 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಎಸ್.ಎಸ್. ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು. )

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ